RNU AIR DHARWAD

MAY 03, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ಕೇಂದ್ರ ಸಚಿವ ಡಾಕ್ಟರ್ ಮನ್ಸುಖ ಮಾಂಡವೀಯ, ದೊಡ್ಡಬಳ್ಳಾಪುರದ ಇ.ಎಸ್.ಐ.ಸಿ ಆಸ್ಪತ್ರೆ ಉದ್ಘಾಟನೆ ಹಾಗೂ ಬಳ್ಳಾರಿಯ ಕಾರ್ಮಿಕರ ಆಸ್ಪತ್ರೆಗೆ, ಶಂಕುಸ್ಥಾಪನೆ.
- ರಾಜ್ಯದಲ್ಲಿ, 24 ಸಾವಿರದ 300 ಹುದ್ದೆಗಳ ಭರ್ತಿಗೆ, ಆರ್ಥಿಕ ಇಲಾಖೆ, ಮಂಜೂರಾತಿ.

- ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳ, ಉಪ ಚುನಾವಣೆ ಮತ ಎಣಿಕೆ ನಾಳೆ.
- 'ಶಾಂತಿಯ ಮೂಲಕ, ಭವಿಷ್ಯ ರೂಪಿಸೋಣ': ಧ್ಯೇಯದೊಂದಿಗೆ, ಇಂದು ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಕೇಂದ್ರ ಕಾರ್ಮಿಕ, ಉದ್ಯೋಗ ಹಾಗೂ ಯುವಜನ ವ್ಯವಹಾರ ಮತ್ತು ಕ್ರೀಡಾ ಖಾತೆ ಸಚಿವ, ಡಾಕ್ಟರ್ ಮನ್ಸುಖ್ ಮಾಂಡವೀಯ, ನೂರು ಹಾಸಿಗೆಗಳ, ನೌಕರರ ರಾಜ್ಯ ವಿಮಾ ನಿಗಮದ, ನೂತನ ಆಸ್ಪತ್ರೆಯನ್ನು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದ, ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ, ಇಂದು ಬೆಳಗ್ಗೆ 10.30ಕ್ಕೆ, ಉದ್ಘಾಟಿಸಲಿದ್ದಾರೆ. ಬಳ್ಳಾರಿಯಲ್ಲಿ ಹೊಸದಾಗಿ ನಿರ್ಮಾಣವಾಗುವ, 100 ಹಾಸಿಗೆ ಇ.ಎಸ್.ಐ.ಸಿ ಆಸ್ಪತ್ರೆಗೆ, ಸಚಿವರು, ವರ್ಚುವಲ್ ವೇದಿಕೆಯಲ್ಲಿ, ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ, ರಾಜ್ಯ ಖಾತೆ ಸಚಿವರಾದ ಶೋಭಾ ಕರಂದ್ಲಾಜೆ, ಸಂಸದ ಡಾಕ್ಟರ್ ಕೆ.ಸುಧಾಕರ, ಶಾಸಕ ಧೀರಜ ಮುನಿರಾಜು ಭಾಗವಹಿಸಲಿದ್ದಾರೆ.

<><><>

ಆರ್ಥಿಕ ಇಲಾಖೆ, ವಿವಿಧ 24 ಸಾವಿರದ 300 ಹುದ್ದೆಗಳ ಭರ್ತಿಗೆ ಮಂಜೂರಾತಿ ನೀಡಿದೆ. ಬೆಂಗಳೂರಿನ, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, ನೂತನ ಕರ್ನಾಟಕ ಪ್ರಗತಿ ಪೋರ್ಟಲ್ ಹಾಗೂ ಕೈಪಿಡಿ ಬಿಡುಗಡೆಗೊಳಿಸಿ ಮಾತನಾಡಿದ, ಮುಖ್ಯಮಂತ್ರಿ

ಸಿದ್ದರಾಮಯ್ಯ, ಕಲ್ಯಾಣ ಕರ್ನಾಟಕ ವೃಂದದ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗದೇ ಬಾಕಿ ಉಳಿದ, 32 ಸಾವಿರದ 132 ಹುದ್ದೆಗಳಿವೆ. ಕೆಲ ಇಲಾಖೆಗಳಲ್ಲಿ, ವೃಂದ ಮತ್ತು ನೇಮಕಾತಿ ನಿಯಮಾವಳಿ ಪರಿಷ್ಕರಣೆ ಬಾಕಿ ಇದೆ. ಶೀಘ್ರ ನೇಮಕಾತಿ ಅಧಿಸೂಚನೆ ಹೊರಡಲಿದೆ, ಎಂದರು.

<><><>

ಕಚ್ಚಾ ರೇಷ್ಮೆ ಉತ್ಪಾದಿಸುವಲ್ಲಿ, ಕರ್ನಾಟಕ, ದೇಶಕ್ಕೆ ಮೊದಲ ಸ್ಥಾನದಲ್ಲಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಬೆಂಗಳೂರಿನ ಓಕಳೀಪುರಂನಲ್ಲಿ, 666 ಕೋಟಿ 75 ಲಕ್ಷ ರೂಪಾಯಿ ವೆಚ್ಚದಲ್ಲಿ, ನೂತನವಾಗಿ ನಿರ್ಮಾಣಗೊಳ್ಳಲಿರುವ, ರೇಷ್ಮೆ ಹಾಗೂ ಖನಿಜ ಭವನದ, ಶಂಕುಸ್ಥಾಪನೆ ನೆರವೇರಿಸಿ, ಇ–ರೇಷ್ಮೆ ಪೋರ್ಟಲ್ ಬಿಡುಗಡೆ ಮಾಡಿ, ಅವರು ಮಾತನಾಡಿದರು. ರೇಷ್ಮೆ ಕೃಷಿ ಆಧರಿಸಿ, ರಾಜ್ಯದ 1 ಲಕ್ಷದ 50 ಸಾವಿರ ಕುಟುಂಬಗಳು, ಬದುಕು ಕಟ್ಟಿಕೊಂಡಿವೆ. ರೇಷ್ಮೆ, ತೋಟಗಾರಿಕೆ, ಪಶು ಸಂಗೋಪನೆಯತ್ತ, ಯುವ ಕೃಷಿಕರನ್ನು ಸೆಳೆಯಲು, ವೈಜ್ಞಾನಿಕ ಹಾಗೂ ಲಾಭದಾಯಕ ಕೃಷಿ ಕೈಗೊಳ್ಳಲು, ತರಬೇತಿ ನೀಡಲಾಗುತ್ತಿದೆ ಎಂದು, ಮುಖ್ಯಮಂತ್ರಿ ಹೇಳಿದರು. ಹಾಲು ಉತ್ಪಾದನೆಯಲ್ಲಿ ರಾಜ್ಯ, ದೇಶಕ್ಕೆ ಎರಡನೇ ಸ್ಥಾನ ಹಾಗೂ ಕಾಫಿ ಉತ್ಪಾದನೆಯಲ್ಲಿ, ಮೊದಲ ಸ್ಥಾನದಲ್ಲಿದೆ ಎಂದರು.

<><><>

ವಿಜಯಪುರ ಜಿಲ್ಲೆಯಲ್ಲಿ, ಅಂದಾಜು 60 ಸಾವಿರ ಎಕರೆ ಪ್ರದೇಶದಲ್ಲಿ, ಥಾಮ್ಸನ್ ಸೀಡಲೆಸ್, ಸೊನಾಟ ಸೇರಿದಂತೆ, ಇತರೆ ತಳಿ ದ್ರಾಕ್ಷಿ ಬೆಳೆಯಲಾಗುತ್ತಿದೆ. ಮೌಲ್ಯವರ್ಧಿತ ಉತ್ಪನ್ನವಾಗಿ, ಒಣ ದ್ರಾಕ್ಷಿ ಸಹ ತಯಾರಿಸಲಾಗುತ್ತಿದೆ. ವಿಜಯಪುರ ದ್ರಾಕ್ಷಿಗೆ ಭೌಗೋಳಿಕ ಸೂಚ್ಯಾಂಕ ಮಾನ್ಯತೆ ಅಗತ್ಯವಿದೆ. ರಾಷ್ಟ್ರೀಯ ತೋಟಗಾರಿಕೆ ಮಂಡಳಿ ನಿರ್ದೇಶಕ, ಭೀಮಸೇನ ಕೋಕರೆ, ಜಿ.ಐ. ಟ್ಯಾಗ್ ಮಾನ್ಯತೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಭೀಮಸೇನ ಮಹದೇವಪ್ಪ ಕೋಕರೆ ಧ್ವನಿ – 51 ಸೆಕೆಂದುಗಳು

<><><>

ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಮತ ಎಣಿಕೆ ನಾಳೆ, ನಡೆಯಲಿದೆ. ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ, ಬೆಳಗ್ಗೆ 8 ಗಂಟೆಯಿಂದ ಮತ ಎಣಿಕೆ ಆರಂಭವಾಗಲಿದೆ. ಜಿಲ್ಲಾಧಿಕಾರಿ ಸಂಗಪ್ಪ, ಇಲೆಕ್ಟ್ರಾನಿಕ್ ವೋಟಿಂಗ್ ಮಷೀನ್ ಮತ ಎಣಿಕೆಗೆ, ಒಟ್ಟು 14 ಮೇಜುಗಳ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ವತಿಯಿಂದ ಇಂದು ಮಧ್ಯಾಹ್ನ 2 ಗಂಟೆಯಿಂದ 5 ರ ವರೆಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆ; ನೀಟ್ ಯುಜಿ–2026 ಪರೀಕ್ಷೆಗಳು ನಡೆಯಲಿವೆ. ಶಿವಮೊಗ್ಗ ನಗರದ ಒಟ್ಟು 12 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿದ್ದು, 4 ಸಾವಿರದ 577 ಜನ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಪ್ರಬಾರಿ ಜಿಲ್ಲಾಧಿಕಾರಿ ಎನ್. ಹೇಮಂತ ತಿಳಿಸಿದ್ದಾರೆ.

<><><>

'ಶಾಂತಿಯ ಮೂಲಕ, ಭವಿಷ್ಯ ರೂಪಿಸೋಣ' ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನಾಚರಣೆ. ಸ್ವತಂತ್ರ ಮತ್ತು ಬಹು ಮಾಧ್ಯಮದ ಮಹತ್ವವನ್ನು ಸಾರಲು, ಮೇ 3ನೇ ತಾರೀಖು, ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನವಾಗಿ, 1993ರಲ್ಲಿ ವಿಶ್ವಸಂಸ್ಥೆ ಸಾಮಾನ್ಯ ಸಭೆ ನಿರ್ಧರಿಸಿತು.

<><><>

ವಿಜಯಪುರದ, ವಿವಿಧ ಇಲಾಖೆಗಳ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ, ಮಾಹಿತಿ ಹಕ್ಕು ಕಾಯ್ದೆ ಕುರಿತು, ವಿಶೇ ' ತರಬೇತಿ ಕಾರ್ಯಾಗಾರ ಜರುಗಿತು. ರಾಜ್ಯ ಮಾಹಿತಿ ಹಕ್ಕು ಆಯೋಗದ ಆಯುಕ್ತ, ರುದ್ರಣ್ಣ ಹರ್ತಿಕೋಟೆ, ಮಾರ್ಗದರ್ಶನ ಮಾಡಿದರು.

<><><>

ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ತುಂಗಭದ್ರಾ ಜಲಾಶಯಕ್ಕೆ ಇಂದು ಬೆಳಗ್ಗೆ 9 ಗಂಟೆಗೆ, ಜಲ ಸಂಪನ್ಮೂಲ ಖಾತೆ ಸಚಿವರೂ ಆದ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಸಣ್ಣ ನೀರಾವರಿ ಖಾತೆ ಸಚಿವ ಎನ್.ಎಸ್. ಬೋಸರಾಜು, ಭೇಟಿ ನೀಡಲಿದ್ದಾರೆ. ಜಲಾಶಯಕ್ಕೆ ನೂತನವಾಗಿ ಅಳವಡಿಸಲಾಗುತ್ತಿರುವ, ಕ್ರಸ್ಟ್ ಗೇಟ್ ಕಾಮಗಾರಿಯನ್ನು, ಪರಿವೀಕ್ಷಿಸಲಿದ್ದಾರೆ. ಬಳಿಕ, 11.30ಕ್ಕೆ ರಾಯಚೂರು ಜಿಲ್ಲೆ, ಸಿಂಧನೂರಿಗೆ ತೆರಳಲಿದ್ದಾರೆ.

<><><>

ತುಮಕೂರು ಜಿಲ್ಲೆ, ಕೊಟ್ಟಿಗೆ ಗೊಲ್ಲಹಳ್ಳಿ, ಕೊಳಿಹಳ್ಳಿ, ಭೈರಸಂದ್ರ, ಹುಲ್ಲೇನಹಳ್ಳಿ, ತಿಮ್ಮೇಗೌಡನಪಾಳ್ಯ ಗ್ರಾಮಗಳ ಸುತ್ತಮುತ್ತ, ಮರಣ ಹೊಂದಿದ ನವಿಲುಗಳ ದೇಹದಲ್ಲಿ, ಎಚ್–5, ಎನ್1 – ಏವಿಯನ್ ಇನ್‌ಫ್ಲ್ಯುಯೆಂಜಾ ದೃಢಪಟ್ಟಿದೆ. ಭೋಪಾಲ್ ನ, ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ, ನಿಶಾದ್ ಪ್ರಯೋಗಾಲಯ, ವೈರಾಣು ಸೋಂಕನ್ನು ದೃಢಪಡಿಸಿದೆ. ತುಮಕೂರು ಜಿಲ್ಲಾಧಿಕಾರಿ, ವೈರಸ್ ನಿಯಂತ್ರಣ ಕ್ರಮಗಳ ಕುರಿತು, ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ, ಸಭೆ ನಡೆಸಿದರು.

<><><>

ವಿಜಯನಗರ ಜಿಲ್ಲೆ, ಹೊಸಪೇಟೆ ವಲಯದ, ಜೋಳದ ರಾಶಿ ಗುಡ್ಡದಲ್ಲಿ, ಕಾಡ್ಗಿಚ್ಚು ಹಬ್ಬಿದ ಹಿನ್ನೆಲೆ, ಅಗ್ನಿಶಾಮಕ ದಳದ ಸಿಬ್ಬಂದಿ, ಸಮರೋಪಾದಿಯಲ್ಲಿ, ಬೆಂಕಿ ನಂದಿಸಿದ್ದಾರೆ ಎಂದು ವಲಯ ಅರಣ್ಯ ಸಂರಕ್ಷಣಾಧಿಕಾರಿ ಕೌಶಿಕ ದಳವಾಯಿ ತಿಳಿಸಿದ್ದಾರೆ. ಪ್ರಾಣಿ–ಪಕ್ಷಿಗಳ ಜೀವ ಹಾನಿಯಾದ ಬಗ್ಗೆ ಯಾವುದೇ ವರದಿ ಇಲ್ಲ ಎಂದು, ಅವರು ಸ್ಪಷ್ಟ ಪಡಿಸಿದ್ದಾರೆ.

<><><>

1923 ರಲ್ಲಿ, ಚೆನ್ನೈನಲ್ಲಿ, ಲೇಬರ್ ಕಿಸಾನ್ ಪಾರ್ಟಿ ಆಫ್ ಹಿಂದೂಸ್ತಾನ್, ದೇಶದಲ್ಲಿ ಪ್ರಥಮ ಬಾರಿಗೆ, ಮೇ 1ನ್ನು, ಕಾರ್ಮಿಕ ದಿನವಾಗಿ, ಆಚರಿಸಿತ್ತು ಎಂದು, ಕಲಬುರಗಿ ಜಿಲ್ಲೆ, ಕಾನೂನು ಸೇವೆಗಳ ಪ್ರಾಧಿಕಾರದ, ಸದಸ್ಯ ಕಾರ್ಯದರ್ಶಿ, ಶ್ರೀನಿವಾಸ ನವಲೆ ತಿಳಿಸಿದ್ದಾರೆ. ಶಹಾಬಾದ ರಸ್ತೆಯ, ನಂದೂರು ಶ್ರೀ ವೆಂಕಟೇಶ್ವರ ಪ್ರಾಥಮಿಕ ಶಾಲೆಯಲ್ಲಿ, ಅಂತಾರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಕಾರ್ಯಕ್ರಮಕ್ಕೆ, ಚಾಲನೆ ನೀಡಿ, ಮಾತನಾಡಿದ ಅವರು, ದುಡಿಮೆಗೆ ಎಂಟು ಗಂಟೆ, ಮನೋರಂಜನೆಗೆ ಎಂಟು ಗಂಟೆ ಹಾಗೂ ವಿಶ್ರಾಂತಿಗೆ ಎಂಟು ಗಂಟೆ ಎಂಬ ತತ್ವವನ್ನು, ಕಾರ್ಮಿಕ ದಿನಾಚರಣೆ ಪ್ರತಿಪಾದಿಸುತ್ತದೆ ಎಂದರು.

<><><>

ಜೈನ ಸಮಾಜದ ಪ್ರತಿನಿಧಿ ಮಂಡಳಿ, ಅಲ್ಪಸಂಖ್ಯಾತ ಕಲ್ಯಾಣ ಖಾತೆ ಸಚಿವ ಬಿ. ಜಡ್. ಜಮೀರ್ ಅಹ್ಮದ್ ಅವರನ್ನು ಭೇಟಿ ಮಾಡಿ, ಜೈನ ಸಮಾಜದ ಅಭಿವೃದ್ಧಿಗಾಗಿ ವಿವಿಧ ಬೇಡಿಕೆಗಳನ್ನು ಒಳಗೊಂಡ ಮನವಿ ಸಲ್ಲಿಸಿದೆ. ಮಹೇಂದ್ರ ಸಿಂಘಿ ಅವರು ಸಚಿವರಿಗೆ ಮನವಿ ಸಲ್ಲಿಸಿ, ಜೈನ ಸಮಾಜದ ಸ್ಥಾನಕ, ಮಂದಿರ ಹಾಗೂ ತೇರಾಪಂಥ ಸಭಾಭವನಗಳಲ್ಲಿ ನಡೆಯುವ ಧಾರ್ಮಿಕ ಪಾಠಶಾಲೆಗಳಲ್ಲಿ ಸೇವೆ ಸಲ್ಲಿಸುವವರಿಗೆ, 6 ಸಾವಿರ ರೂಪಾಯಿ ಗೌರವ ಧನ ನೀಡುವಂತೆ, ಕೋರಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಕೇಂದ್ರ ಸಚಿವ ಡಾಕ್ಟರ್ ಮನ್ಸುಖ ಮಾಂಡವೀಯ, ದೊಡ್ಡಬಳ್ಳಾಪುರದ ಇ.ಎಸ್.ಐ.ಸಿ ಆಸ್ಪತ್ರೆ ಉದ್ಘಾಟನೆ ಹಾಗೂ ಬಳ್ಳಾರಿಯ ಕಾರ್ಮಿಕರ ಆಸ್ಪತ್ರೆಗೆ, ಶಂಕುಸ್ಥಾಪನೆ.

ರಾಜ್ಯದಲ್ಲಿ, 24 ಸಾವಿರದ 300 ಹುದ್ದೆಗಳ ಭರ್ತಿಗೆ, ಆರ್ಥಿಕ ಇಲಾಖೆ, ಮಂಜೂರಾತಿ.
ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳ, ಉಪ ಚುನಾವಣೆ ಮತ ಎಣಿಕೆ ನಾಳೆ.

'ಶಾಂತಿಯ ಮೂಲಕ, ಭವಿಷ್ಯ ರೂಪಿಸೋಣ'; ಧ್ಯೇಯದೊಂದಿಗೆ, ಇಂದು ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>